**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.30/2020**

ಸಾಕ್ಷಿದಾರರ ಹೆಸರು : ಲಿಂಗನಹಳ್ಳಿ ಮಂಜುನಾಥ

ತಂದೆಯ/ಗಂಡನ ಹೆಸರು : ಬಸವರಾಜಪ್ಪ

ವಯಸ್ಸು : 27 ವರ್ಷ

ಉದ್ಯೋಗ : ಗಾರೆ ಕೆಲಸ

ವಾಸ ಸ್ಥಳ : ಮಲೇಬೆನ್ನೂರು

ಪಿ.ಡಬ್ಲ್ಯೂ 7

ಸಿ.ಡಬ್ಲ್ಯೂ 9

ದಿ:19-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. 3 ವರ್ಷಗಳ ಹಿಂದೆ ಉಕ್ಕಡಗಾತ್ರಿ ಹೊಳೆ ಹತ್ತಿರ ಪೋಲೀಸರು ನನಗೆ ಕರೆಸಿದ್ದರು. ಚೈನ್ ಕಳ್ಳತನ ಆಗಿದೆ ಸಹಿ ಮಾಡಲು ಹೇಳಿದರು. ಆ ಸಮಯದಲ್ಲಿ ತೆಗೆದ ಪೋಟೋ ನೋಡಿ ಗುರುತಿಸಿದ್ದು ಅದು ಈಗಾ ಗಲೆ ನಿ.ಪಿ.- 6 ಎಂದು ಗುರುತಿಸಲಾಗಿದೆ. ನಿ.ಪಿ.- 6 ನ್ನು ಪೋಲೀಸ್ ಠಾಣೆ ಯಲ್ಲಿ ತೆಗೆಯಲಾಗಿರುತ್ತದೆ. ಆ ಪೋಟೋದಲ್ಲಿ ಚೈನನ್ನು ಒಂದು ಮಹಿಳೆಗೆ ಪೋಲೀಸರು ಕೊಡುತ್ತಿದ್ದಾರೆ. ನಿ.ಪಿ.- 4 ರ ಪಂಚನಾಮೆಯಲ್ಲಿ ಇರುವ ನನ್ನ ಸಹಿಯನ್ನು ನಿ.ಪಿ.-4(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ .HSY , ವಕೀಲರಿಂದ ಆರೋಪಿತರ ಪರವಾಗಿ**:

2. ಪೋಲೀಸರು ಪೋಟೋಗೆ ನಿಂತಿಕೊ ಎಂದರು, ನಾನು ನಿಂತಿದ್ದೆ. ಆ ಚೈನು ಎಂತದ್ದು ಎಂದು ನನಗೆ ಮಾಹಿತಿ ಇಲ್ಲ. ನಿ.ಪಿ.- 4 ರಲ್ಲಿ ಏನು ಬರೆದಿದ್ದಾರೆ ಅಂತ ನನಗೆ ಗೊತ್ತಿಲ್ಲ. ಪೋಲೀಸರು ಸಹಿ ಮಾಡಲು ಹೇಳಿದರು ನಾನು ಸಹಿ ಮಾಡಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.